## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1004 (1101) |
| ಮಾನ್ಯ ಸದಸ್ಯರ ಹೆಸರು | : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 17.03.2025 |
| ಉತ್ತರಿಸುವ ಸಚಿವರು | : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

*****

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಇರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸ್ವಂತ ಕಟ್ಟಡವಿರುವ ಉಪಕೇಂದ್ರಗಳ ಸಂಖ್ಯೆ ಎಷ್ಟು; ಹೊಸ ಕಟ್ಟಡಗಳ ನಿರ್ಮಾಣಕ್ಕೆ ಎಷ್ಟು ಪ್ರಸ್ತಾವನೆ ಇಲಾಖೆಯ ಮುಂದಿದೆ; ಕಂದಾಯ ಇಲಾಖೆಗೆ ಜಾಗಕ್ಕಾಗಿ ಎಷ್ಟು ಪ್ರಸ್ತಾವನೆ ಸಲ್ಲಿಸಲಾಗಿದೆ: (ಜಿಲ್ಲಾವಾರು ವಿವರ ನೀಡುವುದು)</td><td>ರಾಜ್ಯದಲ್ಲಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಸ್ವಂತ ಕಟ್ಟಡವಿರುವ ಉಪಕೇಂದ್ರಗಳ ಸಂಖ್ಯೆ4866<br><br>ಹೊಸ ಕಟ್ಟಡ ನಿರ್ಮಾಣದ ಪ್ರಸ್ತಾವನೆಗಳ ಸಂಖ್ಯೆ 1156<br><br>ಕಂದಾಯ ಇಲಾಖೆಗೆ ಜಾಗಕ್ಕಾಗಿ ಸಲ್ಲಿಸಿರುವ ಪ್ರಸ್ತಾವನೆಗಳ ಸಂಖ್ಯೆ1067<br><br>ಮಾಹಿತಿಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.</td></tr>
<tr><td>ಆ.</td><td>ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಆರೋಗ್ಯ ಉಪಕೇಂದ್ರಗಳ ಕೊರತೆಯಿಂದ ಸಾರ್ವಜನಿಕರು ತುರ್ತು ಆರೋಗ್ಯ ಸೇವೆಗಳಿಗೆ ದೂರದ ನಗರ ಮತ್ತು ತಾಲ್ಲೂಕು ಕೇಂದ್ರಗಳಿಗೆ ಹೋಗಬೇಕಾಗಿರುವ ಅನಿವಾರ್ಯತೆ ಸೃಷ್ಟಿಯಾಗಿರುವ ಬಗ್ಗೆ ಸರಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಈ ಕುರಿತು ಇಲಾಖೆ ಕೈಗೊಂಡ ಕ್ರಮವೇನು;</td><td>ಸಾರ್ವತ್ರಿಕ ಆರೋಗ್ಯ ರಕ್ಷಣೆ ಕಾರ್ಯಕ್ರಮದಡಿಯಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರಗಳಲ್ಲಿ ಈ ಕೆಳಕಂಡ 12 ವಿಸ್ತೃತ ಆರೋಗ್ಯ ಸೇವೆಗಳನ್ನು ನೀಡಲಾಗುತ್ತಿದೆ.<br><br>1. ತಾಯಿ ಆರೋಗ್ಯ – ಗರ್ಭಿಣಿ ಹಾಗೂ ಬಾಣಂತಿ ಸೇವೆಗಳು<br>2. ನವಜಾತ ಶಿಶು ಆರೈಕೆ ಹಾಗೂ ಚುಚ್ಚು ಮದ್ದು ಸೇವೆಗಳು<br>3. ಮಕ್ಕಳ ಹಾಗೂ ಹದಿಯರೆಯದವರ ಆರೋಗ್ಯಕ್ಕೆ ಸಂಬಂಧಿಸಿದ ಸೇವೆಗಳು<br>4. ಕುಟುಂಬ ಕಲ್ಯಾಣ ಯೋಜನೆಗಳ ಅಡಿಯಲ್ಲಿ ಸೇವೆಗಳು<br>5. ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು<br>6. ಸಾಂಕ್ರಾಮಿಕ ರೋಗಗಳ ನಿರ್ವಹಣೆ<br>7. ಅಸಾಂಕ್ರಾಮಿಕ ರೋಗಗಳ ನಿರ್ವಹಣೆ<br>8. ಹಿರಿಯ ನಾಗರಿಕರ ಹಾಗೂ ಅಂತಿಮ ಹಂತದ ಆರೋಗ್ಯ ಪಾಲನೆ<br>9. ಕಣ್ಣಿನ ಆರೋಗ್ಯ ಸೇವೆಗಳು<br>10. ದಂತ ಆರೋಗ್ಯ ಸೇವೆಗಳು<br>11. ತುರ್ತು ವೈದ್ಯಕೀಯ ಸೇವೆಗಳು<br>12. ಮಾನಸಿಕ ಆರೋಗ್ಯ ಸೇವೆಗಳು.<br><br>ಈ ಮೇಲ್ಕಂಡ ಆರೋಗ್ಯ ಸೇವೆಯನ್ನು ಆಯುಷ್ಮಾನ್ ಆರೋಗ್ಯ ಮಂದಿರಗಳಲ್ಲಿ ನೀಡಲಾಗುತ್ತಿದ್ದು, ಹೆಚ್ಚಿನ ಚಿಕಿತ್ಸೆ ಅವಶ್ಯಕ ಇದ್ದಲ್ಲಿ ತಾಲೂಕು ಆಸ್ಪತ್ರೆ, ಹಾಗೂ ಜಿಲ್ಲಾಸ್ಪತ್ರೆಗಳಿಗೆ ಶಿಫಾರಸ್ಸು ಮಾಡಲಾಗುತ್ತದೆ.</td></tr>
<tr><td>ಇ.</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಂಜೂರಾಗಿರುವ ಎಷ್ಟು ಉಪಕೇಂದ್ರಗಳಿಗೆ ಸ್ವಂತ ಕಟ್ಟಡ ಇದೆ: ಉಪಕೇಂದ್ರಗಳಿಗಾಗಿ ಕಂದಾಯ ಇಲಾಖೆಗೆ ಜಾಗಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾದ ಪ್ರಕರಣಗಳು ಯಾವ ಹಂತದಲ್ಲಿದೆ:</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸ್ವಂತ ಕಟ್ಟಡವಿರುವ ಉಪಕೇಂದ್ರಗಳ ಹಾಗೂ ಕಂದಾಯ ಇಲಾಖೆಗೆ ಜಾಗಕ್ಕಾಗಿ ಸಲ್ಲಿಸಿರುವ ಪ್ರಸ್ತಾವನೆಗಳ ವಿವರಗಳು ಕೆಳಗಿನಂತಿವೆ: -<br><table><tr><th>ಜಿಲ್ಲೆ</th><th>ಸ್ವಂತ ಕಟ್ಟಡ</th><th>ಕಂದಾಯ ಇಲಾಖೆ ಜಾಗದ ಪ್ರಸ್ತಾವನೆ</th></tr><tr><td>ದಕ್ಷಿಣ ಕನ್ನಡ</td><td>205</td><td>42</td></tr><tr><td>ಉಡುಪಿ</td><td>140</td><td>96<br>ಇದರಲ್ಲಿ 09 ಆರ್.ಟಿ.ಸಿ ಆರೋಗ್ಯ ಇಲಾಖೆಯ ಹೆಸರಿನಲ್ಲಿ ಆಗಿರುತ್ತದೆ.</td></tr></table></td></tr>
<tr><td>ಈ.</td><td>ಉಭಯ ಜಿಲ್ಲೆಗಳಲ್ಲಿ ಈಗಾಗಲೇ ಕೆಲವು ಉಪಕೇಂದ್ರಗಳಿಗೆ ಸಮುದಾಯ ಆರೋಗ್ಯ ಅಧಿಕಾರಿಗಳನ್ನು (ಸಿಎಚ್‌ಒ) ನೇಮಿಸಲಾಗಿದ್ದು ಅನೇಕ ಆರೋಗ್ಯ ಸೇವೆಗಳನ್ನು ನೀಡುತ್ತಿದ್ದು ಅವರಿಗೆ ಅಲ್ಲಿಯೇ ವಾಸ್ತವ್ಯ ಮಾಡಲು ಅವಕಾಶವಾಗುವಂತೆ ವಸತಿ ಗೃಹಗಳನ್ನು ನಿರ್ಮಿಸುವ ಹಾಗೂ ಈ ಮೂಲಕ ಗ್ರಾಮಾಂತರ ಜನರಿಗೆ ಕೆಲವು</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಘಟಕದ ವತಿಯಿಂದ ಎನ್ ಹೆಚ್ ಎಂ-15ನೇ ಹಣಕಾಸು ಯೋಜನೆಯಡಿ ಈ ಕೆಳಕಂಡ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು ಈ ಎಲ್ಲಾ ಉಪಕೇಂದ್ರಗಳನ್ನು-IPHS ನ ಅನುಮೋದಿತ ನಕ್ಷೆಯಂತೆ</td></tr>
</table>

| | | |
|---|---|---|
| | ತುರ್ತು ಆರೋಗ್ಯ ಸೇವೆ ನೀಡುವ ಬಗ್ಗೆ ಸರ್ಕಾರ ಯಾವ ರೀತಿ ಕ್ರಮವಹಿಸುತ್ತಿದೆ; | ನೆಲ ಅಂತಸ್ತಿನಲ್ಲಿ ಆರೋಗ್ಯ ಹಾಗೂ ಕ್ಷೇಮ ಕೇಂದ್ರ ಹಾಗೂ ಮೊದಲನೇ ಅಂತಸ್ತಿನಲ್ಲಿ ಸಿ.ಎಚ್.ಒ.ಗಳಿಗೆ ವಸತಿ ಗೃಹವನ್ನು ನಿರ್ಮಿಸಲಾಗುತ್ತಿದೆ. |
| ಈ) | ರಾಜ್ಯದಲ್ಲಿ ತುರ್ತು ಆರೋಗ್ಯ ಸೇವೆಗಳನ್ನು ನೀಡುವ ಸಿಬ್ಬಂದಿಗಳು ಕೆಲಸದ ಸ್ಥಳಗಳಲ್ಲಿ ಅಥವಾ ಅಗತ್ಯಕ್ಕೆ ತಕ್ಷಣ ಅಲ್ಪಾವಧಿಯಲ್ಲಿ ಆರೋಗ್ಯ ಸೇವಾ ಕೇಂದ್ರಗಳಿಗೆ ತಲುಪುವ ಅಂತರದಲ್ಲಿ ವಾಸ್ತವ್ಯ ಮಾಡುವ ಬಗ್ಗೆ ಯಾವ ರೀತಿಯಲ್ಲಿ ಖಚಿತಪಡಿಸಲಾಗುತ್ತಿದೆ? | ಸಮುದಾಯ ಆರೋಗ್ಯ ಅಧಿಕಾರಿಗಳ ಕರಾರು ಪತ್ರದಲ್ಲಿ ಸಮುದಾಯಕ್ಕೆ ಉತ್ತಮ ಆರೋಗ್ಯ ಸೇವೆ ನೀಡುವ ನಿಟ್ಟಿನಲ್ಲಿ ಕೇಂದ್ರ ಸ್ಥಾನ/ಕೇಂದ್ರ ಸ್ಥಾನದ ವ್ಯಾಪ್ತಿಯಲ್ಲಿ ವಾಸಿಸಲು ಸೂಚಿಸಲಾಗಿರುತ್ತದೆ. |

ಆಕುಕ 49 ಎಸ್‌ಎಂಎಂ 2025

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

## ಅನುಬಂಧ-1

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಘಟಕದಿಂದ 2021-22 ರಿಂದ 2025-26 ರವರೆಗೆ 15ನೇ ಹಣಕಾಸು ಆಯೋಗದ ಯೋಜನೆಯಡಿಯಲ್ಲಿ 626 ಉಪಕೇಂದ್ರಗಳನ್ನು ಒಟ್ಟು ಅಂದಾಜು ಮೊತ್ತ ರೂ.40452.00 ಲಕ್ಷಗಳಲ್ಲಿ ನಿರ್ಮಾಣ ಮಾಡಲು ಯೋಜಿಸಲಾಗಿದ್ದು, 626 ಉಪಕೇಂದ್ರಗಳ ಪೈಕಿ 35 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ, 271 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ, 127 ಕಾಮಗಾರಿಗಳಿಗೆ LOI ನೀಡಲಾಗಿರುತ್ತದೆ, 189 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತವೆ ಹಾಗೂ 4 ಕಾಮಗಾರಿಗಳಿಗೆ ನಿವೇಶನ ಲಭ್ಯವಿರುವುದಿಲ್ಲ.

| ಕ್ರ. ಸಂ | ಅನುಮೋದನೆಗೊಂಡಿರುವ ವರ್ಷ | ಕಾಮಗಾರಿಯ ಮಾದರಿ | ಕಾಮಗಾರಿಗಳ ಒಟ್ಟು ಸಂಖ್ಯೆ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಷರಾ |
|---|---|---|---|---|---|
| 1 | 2021-22 | HWC (AAM) | 19 | 1054.5 | 19 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. |
| 2 | 2022-23 | | 18 | 1112.5 | *16 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.<br>*1 ಕಾಮಗಾರಿ Dropped.<br>*1 ಕಾಮಗಾರಿಗೆ ನಿವೇಶನ ಲಭ್ಯವಿರುವುದಿಲ್ಲ. |
| 3 | 2023-24 | | 205 | 13325 | *166 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.<br>*2 ಕಾಮಗಾರಿಗಳಿಗೆ LOI ನೀಡಲಾಗಿರುತ್ತದೆ.<br>*2 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತವೆ.<br>*35 ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ. |
| 4 | 2024-25 | | 199 | 12935 | *40 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.<br>*56 ಕಾಮಗಾರಿಗಳಿಗೆ LOI ನೀಡಲಾಗಿರುತ್ತದೆ.<br>*101 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತವೆ.<br>*2 ಕಾಮಗಾರಿಗಳಿಗೆ ನಿವೇಶನ ಲಭ್ಯವಿರುವುದಿಲ್ಲ. |
| 5 | 2025-26 | | 185 | 12025 | *30 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.<br>*69 ಕಾಮಗಾರಿಗಳಿಗೆ LOI ನೀಡಲಾಗಿರುತ್ತದೆ.<br>*86 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. |
| ಒಟ್ಟು | | | 626 | 40452 | |

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಘಟಕದಿಂದ 2025-26ನೇ ಸಾಲಿಗೆ PM-ABHIM ಯೋಜನೆಯಡಿಯಲ್ಲಿ 530 ಉಪಕೇಂದ್ರಗಳನ್ನು ಒಟ್ಟು ಅಂದಾಜು ಮೊತ್ತ ರೂ.34450.00 ಲಕ್ಷಗಳಲ್ಲಿ ನಿರ್ಮಾಣ ಮಾಡಲು ಯೋಜಿಸಲಾಗಿದ್ದು, 530 ಉಪಕೇಂದ್ರಗಳ ಪೈಕಿ138 ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿರುತ್ತದೆ, 186 ಕಾಮಗಾರಿಗಳಿಗೆ LOI ನೀಡಲಾಗಿರುತ್ತದೆ, 206 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತವೆ.

| ಕ್ರ.ಸಂ | ಅನುಮೋದನೆಗೊಂಡಿರುವ ವರ್ಷ | ಕಾಮಗಾರಿಯ ಮಾದರಿ | ಕಾಮಗಾರಿಗಳ ಒಟ್ಟು ಸಂಖ್ಯೆ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಷರಾ |
|---|---|---|---|---|---|
| 1 | 2025-26 | RHWC (AAM) | 530 | 34450 | *ಪೈಕಿ138 ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿರುತ್ತದೆ.<br>*186 ಕಾಮಗಾರಿಗಳಿಗೆ LOI ನೀಡಲಾಗಿರುತ್ತದೆ.<br>*206 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತವೆ. |

**Chief Engineer**
**Engineering Wing**
**Health and Family Welfare Department**
**Bengaluru**